# ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ

ಕೌಡಳ್ಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ

# ಸಮುದಾಯ ವಾಸ್ತವ್ಯ ಶಿಬಿರ

# Community Living Camp

## 11 - 13 October 2023





## ಶಿಬಿರ ನಡೆದ ಸ್ಥಳ

### ಮುರಾರ್ಜಿ ವಸತಿ ಶಾಲೆ

ಮರಸುಹೊಸಳ್ಳಿ, ಆಲೂರು ತಾಲ್ಲೂಕು

ಹಾಸನ ಜಿಲ್ಲೆ

# ಸಮುದಾಯ ವಾಸ್ತವ್ಯ ಶಿಬಿರ

ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಲೂರು ತಾಲ್ಲೂಕಿನ ಮರಸುಹೊಸಳ್ಳಿ ಗ್ರಾಮದ ಮುರಾರ್ಜಿ ವಸತಿ ಶಾಲೆಯಲ್ಲಿ ಮೂರು ದಿನಗಳ ಸಮುದಾಯ ವಾಸ್ತವ್ಯ ಶಿಬಿರವನ್ನು ದಿನಾಂಕ 11 ಅಕ್ಟೋಬರ್ 2023 ರಿಂದ 13 ಅಕ್ಟೋಬರ್ 2023 ರವರೆಗೆ ನಡೆಸಲಾಯಿತು.

ಬೆಳಗ್ಗೆ 9ಕ್ಕೆ ವಾಸ್ತವ್ಯ ಶಿಬಿರದ ಸ್ಥಳಕ್ಕೆ ಆಗಮಿಸಿದ ನಾಲ್ಕನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು ಮೊದಲಿಗೆ ಸ್ಥಳದ ವೀಕ್ಷಣೆ ಮಾಡಿದರು. ವಸತಿ ಶಾಲೆಯಾದ್ದರಿಂದ ಶಿಬಿರಾರ್ಥಿಗಳ ವಸತಿ ವ್ಯವಸ್ಥೆ ಹಾಗೂ ಭೋಜನಾ ವ್ಯವಸ್ಥೆಗೆ ಹಾಗೂ ಇನ್ನಿತರ ಎಲ್ಲಾ ಸೌಲಭ್ಯಗಳನ್ನೊಳಗೊಂಡ ಶಾಲೆಯಾದ್ದರಿಂದ ವಸತಿ ಶಾಲೆಯ ಮಹಿಳಾ ವಸತಿ ನಿಲಯಕ್ಕೆ ಮಹಿಳಾ ಶಿಬಿರಾರ್ಥಿಗಳು ಹಾಗೂ ಪುರುಷ ವಸತಿ ನಿಲಯಕ್ಕೆ ಪುರುಷ ಶಿಬಿರಾರ್ಥಿಗಳನ್ನು ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು.

## ಧ್ವಜಾರೋಹಣ

ಬೆಳಗ್ಗೆ 11 ಗಂಟೆಗೆ ಮಾಸ್ತಿ ತಂಡದ ವತಿಯಿಂದ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್ ರವರು ಧ್ವಜಾರೋಹಣ ನೆರವೇರಿಸುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿ ಎನ್.ಎಸ್.ಎಸ್ ಶಿಬಿರ ಹಾಗೂ ಸಮುದಾಯ ವಾಸ್ತವ್ಯ ಶಿಬಿರಕ್ಕೂ ಇರುವ ವ್ಯತ್ಯಾಸ ತಿಳಿಸಿ ಶಿಬಿರವನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸುತ್ತಾ ಶಿಬಿರಕ್ಕೆ ಶುಭ ಹಾರೈಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಮರಸುಹೊಸಳ್ಳಿ ಗ್ರಾಮದ ಮುರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಕಾಶ್ ಬಿ.ಹೆಚ್, ಕಂಪ್ಯೂಟರ್ ನಿರ್ವಾಹಕರಾದ ಶ್ರೀ ಚೇತನ್ ಬಿ.ಎ, ಸಹ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ನೌಕರರಾದ ಶ್ರೀ ತಮ್ಮಯ್ಯ ಹೆಚ್.ಬಿ ಹಾಗೂ ಶ್ರೀ ಮಹೇಶ್ ಎಸ್ ಉಪಸ್ಥಿತರಿದ್ದರು.

## ಶಿಬಿರದ ಉದ್ಘಾಟನೆ:

ದಿನಾಂಕ 11 ಅಕ್ಟೋಬರ್ 2023 ರ ಬುಧವಾರ ಬೆಳಗ್ಗೆ 11.30 ಕ್ಕೆ ಕುವೆಂಪು ತಂಡದವರು ಸಿದ್ಧಪಡಿಸಿದ ವೇದಿಕೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು.




ಆಲೂರು ತಾಲ್ಲೋಕಿನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಶ್ರೀಮತಿ ನಿರ್ಮಲಾ ಎಂ.ಸಿ ರವರು ದೀಪ ಬೆಳಗಿಸುವ ಮೂಲಕ ಶಿಬಿರವನ್ನು ಉದ್ಘಾಟಿಸಿ ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು ಹಾಗೂ ಉತ್ತಮ ಪ್ರಜೆಗಳಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಿಳಿಸಿ ಶಿಬಿರದ ಸದುಪಯೋಗ ಪಡಿಸಿಕೊಳ್ಳಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಕೀಲರಾದ ಶ್ರೀ ನಾಗರಾಜು ಕೆ.ಜಿ ರವರು ಮಾತನಾಡುತ್ತಾ ನಾವು ವಿವೇಕಾನಂದರ ಆದರ್ಶಗಳನ್ನು ಪಾಲಿಸಿಕೊಳ್ಳಬೇಕು ನಮಗೆ ಎಲ್ಲಾ ವಿದ್ಯಾರ್ಥಿಗಳನ್ನು ಬೆಳೆಸುವ ಘನ ಜವಾಬ್ದಾರಿ ಇದೆ. ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದದ್ದು ಎಂದು ತಿಳಿಸುತ್ತಾ ಇಂದು ಹೆಣ್ಣು ಮಕ್ಕಳ ದಿನವಾಗಿದ್ದು ಅದರ ಮಹತ್ವವನ್ನು ತಿಳಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ ಮರಸುಹೊಸಳ್ಳಿ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಕಾಶ್ ಹೆಚ್.ಎಸ್ ರವರು ತಮ್ಮ ಬಿ.ಇಡಿ ಸಂದರ್ಭದಲ್ಲಿ ನಡೆದ ಸಮುದಾಯ ವಾಸ್ತವ್ಯ ಶಿಬಿರದ ಅನುಭವಗಳನ್ನು



ಹಂಚಿಕೊಳ್ಳುತ್ತಾ, ಮುಂದಿನ ದಿನಗಳಲ್ಲಿ ಒಳ್ಳೆಯ ಶಿಕ್ಷಕರಾಗಿ ಶಿಕ್ಷಕ ಹುದ್ದೆಗೆ ತಕ್ಕಂತೆ ಘನತೆಯನ್ನು ಬೆಳೆಸಿಕೊಳ್ಳಬೇಕು, ಶಿಕ್ಷಕರು ತಪ್ಪು ಮಾಡಿದರೆ ಮುಂದಿನ ಸಮುದಾಯವೇ ತಪ್ಪು ಮಾಡಿದಂತೆ, ಆದುದ್ದರಿಂದ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಕರಿಗೆ ಇದೆ. ನಮ್ಮ ಜ್ಞಾನವು ನಮ್ಮ ನಡವಳಿಕೆಯಲ್ಲಿ ಪ್ರತಿಬಿಂಬ ಆಗಬೇಕು. ಶಿಕ್ಷಿತರು ಸಮಾಜವನ್ನು ಪರಿವರ್ತನೆ ಮಾಡಬೇಕು. ನಮ್ಮ ಶಿಕ್ಷಣಕ್ಕೆ ಅರ್ಥ ಬರಬೇಕಾದರೆ ಸಮಕಾಲೀನ ಶಿಕ್ಷಣದ ಮಹತ್ವನ್ನು ತಿಳಿಯಬೇಕು ಎಂದು ಹೇಳುತ್ತಾ ಕೃತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ದಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ, ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುಧ್ದಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ, ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುಧ್ದಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ, ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುಧ್ದಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು ಎಂದು ಅಲ್ಲಮನ ವಚನವನ್ನು ಹೇಳಿ ಕಾಲ ಮತ್ತು ಯುಗಧರ್ಮವನ್ನು ಈಗಿನ ವಿದ್ಯಾರ್ಥಿಗಳ ಮನೋಭಾವವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಣತ್ತೂರು ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಪೃಥ್ವಿ ಜಯರಾಮ್ ರವರು ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ರವರು ಶಿಬಿರಾರ್ಥಿಗಳಿಗೆ ಶಿಕ್ಷಕರು ಸಮುದಾಯದೊಂದಿಗೆ ಹೇಗೆ ವರ್ತಿಸಬೇಕೆಂದು ತಿಳಿಸಿ ಶಿಬಿರದ ಯಶಸ್ಸಿಗೆ ನಮ್ಮೆಲ್ಲರ ಸಂಪೂರ್ಣ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದು ತಿಳಿಸಿದರು. ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ್ ಆರ್ ರವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಸಮಯ ಪ್ರಜ್ಞೆ ಮತ್ತು ಕರ್ತವ್ಯನಿಷ್ಠೆಯ ಪ್ರಾಮುಖ್ಯತೆಯನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಸಮುದಾಯ ವಾಸ್ತವ್ಯ ಶಿಬಿರದಲ್ಲಿ ಕಲಿತ ಮೌಲ್ಯಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಳ್ಳುವ ಮಹತ್ವ ತಿಳಿಸುತ್ತಾ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಪ್ರಾರ್ಥನೆಯನ್ನು ಕುಮಾರಿ ಎಲಿಜಬೆತ್ ಸೋನಿ, ಕುಮಾರಿ ಅಮೃತಾ, ಕುಮಾರಿ ಚಾಂದಿನಿ ನೆರವೇರಿಸಿ ಕುಮಾರಿ ಸುನಿತ ರವರು ನೆರೆದಿದ್ದ ಎಲ್ಲರನ್ನೂ ಸ್ವಾಗತಿಸಿದರು. ಕುಮಾರಿ ಅಮೃತ ಎನ್.ಎಂ ರವರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರೂಪಿಸಿದರು. ಅಂತಿಮವಾಗಿ ಕುಮಾರಿ ಅಂಜಲಿ ಎನ್.ಟಿ ರವರು ನೆರೆದಿದ್ದ ಎಲ್ಲರನ್ನೂ ಹೃದಯಪೂರ್ವಕವಾಗಿ ವಂದಿಸಿದರು. ಉದ್ಘಾಟನಾ ಸಂದರ್ಭದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಶ್ರೀ ಸುರೇಶ್ ಆರ್.ಬಿ, ಶಿಬಿರದ ಸಹ ಸಂಚಾಲಕರಾದ ಶ್ರೀ ತಮ್ಮಯ್ಯ ಹೆಚ್.ಬಿ, ಸಂಸ್ಥೆಯ ನೌಕರರಾದ ಶ್ರೀ ಮಹೇಶ್ ರವರು ಉಪಸ್ಥಿತರಿದ್ದರು.

## ವಿಶೇಷ ಉಪನ್ಯಾಸ

ಮಧ್ಯಾಹ್ನ 3.30ಕ್ಕೆ ಶಿಬಿರಾರ್ಥಿಗಳಿಗೆ **"ಪ್ರಸ್ತುತ ಕಾಲಘಟ್ಟದಲ್ಲಿ ಸಮುದಾಯದೊಡನೆ ಶಿಕ್ಷಕನ ಪಾತ್ರ"** ಎಂಬ ವಿಷಯದ ಕುರಿತಾಗಿ ಆಲೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಲೋಹಿತ್ ಅಗಸರಹಳ್ಳಿ ರವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು.




ಉಪನ್ಯಾಸಕರಾಗಿ ಆಗಮಿಸಿದ ಶ್ರೀ ಲೋಹಿತ್ ಅಗಸರಹಳ್ಳಿ ರವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಶಿಕ್ಷಕರ ಪಾತ್ರವು ಜ್ಞಾನವನ್ನು ನೀಡುವುದಲ್ಲದೆ ವಿದ್ಯಾರ್ಥಿಗಳ ಗುರಿಗಳನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಸಲಹೆ, ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವುದು ಅತ್ಯವಶ್ಯಕವಾಗಿದೆ, ಸಮುದಾಯವು ಶಿಕ್ಷಕನಿಂದ ಬಹಳಷ್ಟನ್ನು ಬಯಸುತ್ತದೆ ಅವೆಲ್ಲವನ್ನೂ ಪೂರೈಸುವ ಸಾಮಾರ್ಥ್ಯ ಪ್ರತಿ ಶಿಕ್ಷಕನಿಗೆ ಇರಬೇಕಾಗಿದೆ. ಒಬ್ಬ ಶಿಕ್ಷಕ ಶಿಕ್ಷಕನಾಗಿರದೆ ಇಡೀ ಗ್ರಾಮದ ಅಭ್ಯುದಯಕ್ಕೆ ಸಹಕರಿಸುವ ರೀತಿಯಲ್ಲಿ ಬದಲಾಗಬೇಕು. ಮಕ್ಕಳಲ್ಲಿ ಕಲಿಕೆಯನ್ನು ಉದ್ದೀಪಿಸುವ ಮಾಂತ್ರಿಕನಾಗಿರಬೇಕು. ನಿತ್ಯವೂ ನಿರಂತರವಾಗಿ ಕಲಿಯುವ ಮೂಲಕ ಮಕ್ಕಳ ಕಲಿಕೆಯನ್ನೇ ತನ್ನ ಏಕೈಕ ಕಾಯಕವನ್ನಾಗಿಸಿಕೊಂಡು ಮಕ್ಕಳ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸರ್ವತೋಮುಖ ಬೆಳವಣಿಗೆಯ ಹರಿಕಾರನಾಗಿರಬೇಕು ಎಂದು ತಿಳಿಸಿದರು.

ಉಪನ್ಯಾಸ ಮುಗಿದ ನಂತರ ಶ್ರೀಯುತರಿಗೆ ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ರವರು ನೆನಪಿನ ಕಾಣಿಕೆ ನೀಡುವ ಮೂಲ ಗೌರವ ಸಮರ್ಪಣೆ ನೆರವೇರಿಸಿಕೊಟ್ಟರು. ಶ್ರೀಯುತರನ್ನು ಶಿಬಿರಾರ್ಥಿ ಆಂಜನೇಯ ರವರು ಪರಿಚಯಿಸಿ, ಶಿಬಿರಾರ್ಥಿ ಕುಮಾರಿ ಶಿಲ್ಪ ಹೆಚ್.ಕೆ ರವರು ನಿರೂಪಿಸಿದರು.

## ಕ್ಷೇತ್ರ ಭೇಟಿ

ಸಂಜೆ 4ಕ್ಕೆ ಶಿಬಿರಾರ್ಥಿಗಳಿಗೆ ವಿಭಿನ್ನ ಪರಿಸರಕ್ಕೆ ಹೊಂದಿಕೊಳ್ಳುವುದು ಹಾಗೂ ಹೊಸ ಪ್ರದೇಶಗಳ ಪರಿಚಯಿಸುವ ದೃಷ್ಟಿಯಿಂದ ಆಲೂರು ಸಮೀಪದ ಮರಸುಹೊಸಹಳ್ಳಿ ಗ್ರಾಮದ ಸಮೀಪದ ಶ್ರೀ ವಿಜಯದುರ್ಗ ಕ್ಷೇತ್ರಕ್ಕೆ ಭೇಟಿ ನೀಡಲಾಯಿತು. ಶಿಬಿರ ಸ್ಥಾನದಿಂದ ಸುಮಾರು ಒಂದುವರೆ ಕಿಲೋ ಮೀಟರ್ ದೂರವಿರುವ ಶ್ರೀ ವಿಜಯದುರ್ಗ ಕ್ಷೇತ್ರಕ್ಕೆ ಶಿಬಿರಾರ್ಥಿಗಳು ಕಾಲ್ನಡಿಗೆಯಲ್ಲಿ ನಡೆದು ತಲುಪಿದ ತಕ್ಷಣ ಸುಂದರವಾಗಿ ಕೆತ್ತಲಾದ ಕಮಾನು ಮಾರ್ಗವು ಅಷ್ಟಭುಜಾಕೃತಿಯ ಪುರುಷಾರ್ಥ ಯಾಗ ಮಂಟಪ ಶಿಬಿರಾರ್ಥಿಗಳನ್ನು ಕೈಬೀಸಿ ಕರೆದಂತಿದ್ದವು.

ಶ್ರೀಕ್ಷೇತ್ರದ ಗರ್ಭಗುಡಿಯಲ್ಲಿ ದುರ್ಗಾ ದೇವಿಯ ಎರಡು ರೂಪಗಳ ಕೆತ್ತನೆಯ ದೇವತೆಗಳನ್ನು ನೋಡಿ ಸಂತೋಷಪಟ್ಟರು. ಈ ಕ್ಷೇತ್ರಕ್ಕೆ ನ್ಯಾಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ಸಾಂತ್ವಾನ ಕೋರಿ ಬಹಳಷ್ಟು ಭಕ್ತರು ಇಲ್ಲಿಗೆ ಆಗಮಿಸುತ್ತಾರೆಂದು ತಿಳಿಯಿತು. ಶಿಬಿರಾರ್ಥಿಗಳು ಗರ್ಭಗುಡಿಯ ಮುಂಭಾಗದಲ್ಲಿ ಭಜನೆ ಮಾಡುವ ಮೂಲಕ ದೇವರ ಕೃಪೆ ಆರೋಗ್ಯ ಭಾಗ್ಯ ಸುಖ ಶಾಂತಿ ನೆಮ್ಮದಿ ಪ್ರಾಪ್ತಿಯಾಗಲೆಂದು ಪ್ರಾರ್ಥಿಸಿದರು.



## ಸಾಂಸ್ಕೃತಿಕ ಕಾರ್ಯಕ್ರಮಗಳು

ಸಂಜೆ 7.30ಕ್ಕೆ ಶಿಬಿರದ ಆವರಣದಲ್ಲಿ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು. ಶಿಬಿರಾರ್ಥಿಗಳು ಕೇವಲ ಪಠ್ಯ ವಿಷಯಕ್ಕಷ್ಟೇ ಸೀಮಿತಗೊಳಿಸದೆ ಗ್ರಾಮೀಣ ಜನರ ಬದುಕು, ಆಚಾರ-ವಿಚಾರ, ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಕೆಲಸವನ್ನು ಮಾಡಿದರು. ಈ ಸಂದರ್ಭದಲ್ಲಿ ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಮೌನ ಭೋಜನ

ನಿತ್ಯವೂ ಊಟ ಹಾಗೂ ತಿಂಡಿಯ ಸಂದರ್ಭದಲ್ಲಿ ಅನ್ನಪೂರ್ಣೆ ಸದಾಪೂರ್ಣೆ ಶಂಕರ ಪ್ರಾಣ ವಲ್ಲಭೆ! ಜ್ಞಾನ ವೈರಾಗ್ಯ ಸಿಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ॥ ಎಂಬ ಭೋಜನಾ ಮಂತ್ರದೊಂದಿಗೆ ಪ್ರಾರಂಭಿಸಲಾಗುತ್ತಿತ್ತು.



ಮೊದಲ ದಿನದ ರಾತ್ರಿಯ ಭೊಜನವನ್ನು ಗೋಕಾಕ್ ತಂಡದವರು ಮೌನ ಭೋಜನದ ಮೂಲಕ ನೆರವೇರಿಸಿಕೊಟ್ಟರು. ಮೌನ ಭೋಜನದಲ್ಲಿ ಇದು ಬೇಕು, ಇದು ಬೇಡ.. ಎಂದು ಕೈ ಸನ್ನೇಯಲ್ಲೇ ಹೇಳಿ ಹಾಕಿಸಿಕೊಳ್ಳುವ, ಬೇಡವೆನ್ನುವ ವಿಧಾನವಂತೂ ಖುಷಿಕೊಡುತ್ತಿತ್ತು. ಇಂತಹ ಮೌನಭೋಜನ ಉಣ್ಣುವವರಿಗಷ್ಟೇ ಅಲ್ಲ ಬಡಿಸುವವರಿಗೂ ಸವಾಲು ಕೂಡ ಹೌದು, ಆ ಸವಾಲನ್ನು ಗೋಕಾಕ್ ತಂಡದವರು ಅಚ್ಚುಕಟ್ಟಾಗಿ ನಿಭಾಯಿಸಿದರು. ವಿಶಿಷ್ಟ ಮೌನ ಭೋಜನವನ್ನು ಸವಿದ ಶಿಬಿರಾರ್ಥಿಗಳು ಸಂತಸ ವ್ಯಕ್ತಪಡಿಸಿದರು.

## ಅವಲೋಕನ

ರಾತ್ರಿ ಮಲಗುವ ಮುನ್ನ ಇಂದು ನಡೆದ ಎಲ್ಲಾ ಕಾರ್ಯಕ್ರಮಗಳ ಕುರಿತಾಗಿ ಅವಲೋಕಿಸಿ ಯಾವುದು ಸರಿ ಯಾವುದು ಬದಲಾಯಿಸಿಕೊಂಡರೆ ಇನ್ನೂ ಉತ್ತಮವಾಗಿರುತ್ತದೆ ಹಾಗೂ ನಾಳೆಯ ಇಡೀ ದಿನದ ಯೋಜನೆ ಹೇಗಿರಬೇಕೆಂಬುದನ್ನು ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್ ಹಾಗೂ ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ರವರು ತಿಳಿಸಿದರು. ಅವಲೋಕನದಿಂದಾಗಿ ಇಂದಿನ ತಪ್ಪುಗಳು ನಾಳೆ ಮರುಕಳಿಸದಂತೆ ಎಚ್ಚರವಹಿಸಲು ಸಹಕರಿಸುತ್ತವೆಂದು ತಿಳಿಸಿದರು.

# ಎರಡನೇ ದಿನ (12 ಅಕ್ಟೋಬರ್ 2023ರ ಗುರುವಾರ)

## ಉತ್ಥಾನ್ನ:

ನಿತ್ಯ ಬೆಳಗ್ಗೆ 5ಕ್ಕೆ ಎಲ್ಲಾ ಶಿಬಿರಾರ್ಥಿಗಳನ್ನು ಎಚ್ಚರಿಸುವ ಕೆಲಸ ನಡೆಯುತ್ತಿತ್ತು.

## ಧ್ವಜಾರೋಹಣ



ಎರಡನೇ ದಿನದ ಧ್ವಜಾರೋಹಣವನ್ನು ಮುರಾರ್ಜಿ ಶಾಲೆಯ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ನೆರವೇರಿಸುವ ಮೂಲಕ ಶಿಕ್ಷಕನಿಗೆ ಇರಬೇಕಾಗದ ಶಿಸ್ತಿನ ಕುರಿತಾಗಿ ಚಿಂತನಾ ಕಾರ್ಯಕ್ರಮವನ್ನು ನೆರವೇರಿಸಿದರು.

ಇಂದಿನ ಧ್ವಜಾರೋಹಣ ಸಿದ್ದತೆಯನ್ನು ಕುವೆಂಪು ತಂಡದವರು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ನೌಕರರಾದ ಶ್ರೀ ತಮ್ಮಯ್ಯ ಹೆಚ್.ಬಿ ಹಾಗೂ ಶ್ರೀ ಮಹೇಶ್ ಎಸ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಭಜನೆ:





ಸಮುದಾಯ ವಾಸ್ತವ್ಯ ಶಿಬಿರದಲ್ಲಿ ನಿತ್ಯ ಬೆಳಗ್ಗೆ 6.30 ರಿಂದ 7 ರವರೆಗೆ ಸರ್ವಧರ್ಮ ಭಜನಾ ಕಾರ್ಯಕ್ರಮ ನಡೆಯಿತು.


ನಿತ್ಯ ಭಜನೆಯನ್ನು ಮುರಾರ್ಜಿ ವಸತಿ ಶಾಲೆಯ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ಶಿಬಿರಾರ್ಥಿಗಳಿಗೆ ಹೇಳಿಕೊಡುವ ಮುನ್ನ ಭಜನೆಯ ಪ್ರಾಮುಖ್ಯತೆಯನ್ನು ವಿವರಿಸುತ್ತಾ, ಭಕ್ತಿಯಿಂದ ನಾವು ಭಗವಂತನ ಹಾಡುಗಳನ್ನು ಹೇಳಿದರೆ ಭಗವಂತ ಅತ್ಯಂತ ಸಂತೋಷದಿಂದ ಕುಳಿತು ಕೇಳುತ್ತಾನೆ. ನಾವು ಕುಳಿತುಕೊಂಡು ಭಜಿಸಿದರೆ ಭಗವಂತ ನಿಂತು ಕೇಳುತ್ತಾನೆ. ನಿಂತು ಹಾಡಿದರೆ ಭಗವಂತ ಸಂತೋಷಪಟ್ಟು ನಲಿದು ಕುಣಿಯುತ್ತಾನೆ ಅಂದರೆ ಭಗವಂತನನ್ನು ತೃಪ್ತಿಪಡಿಸಲು ಇರುವ ಏಕೈಕ ಮಾರ್ಗವೇ ಭಜನೆ ಎಂದು ಹೇಳುತ್ತಾ ಸರ್ವಧರ್ಮ ಭಜನೆ ಮಾಡಿಸಿದರು. ನಿತ್ಯ ಭಜನೆ ಸಂದರ್ಭದಲ್ಲಿ ಶ್ರೀ ಲಕ್ಷ್ಮಣ್ ಬಿ ರವರೊಂದಿಗೆ ಶಿಬಿರಾರ್ಥಿ ಶಿಫಾ, ಎಲಿಜಬೆತ್ ಸೋನಿ ಮತ್ತು ದೀಪ ರವರು ಹೇಳಿಕೊಡುವ ಮೂಲಕ ಸಹಕರಿಸಿದರು.

## ವ್ಯಾಯಾಮ:

ಶಿಬಿರದಲ್ಲಿ ನಿತ್ಯ ಬೆಳಗ್ಗೆ 7 ರಿಂದ 7.45 ರವರೆಗೆ ಶಿಬಿರಾರ್ಥಿಗಳಿಗೆ ಮುರಾರ್ಜಿ ವಸತಿ ಶಾಲೆಯ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ನಾನಾ ಸರಳ ಯೋಗಾಸನಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಪರಿಚಯಿಸಿದರು. ಯೋಗಾಸನಗಳನ್ನು ಮಾಡಿಸುವ ಸಂದರ್ಭದಲ್ಲಿ ಯೋಗದ ಮಹತ್ವ ಹಾಗೂ ಪ್ರತಿ ಆಸನಗಳ ಉಪಯೋಗ ಕುರಿತಾಗಿ ವಿವರಿಸಿದರು.







ಬೆಳಗ್ಗೆ 7.45 ರಿಂದ 8 ರವರೆಗೆ ಶಿಬಿರಾರ್ಥಿಗಳಿಗೆ ಮುರಾರ್ಜಿ ವಸತಿ ಶಾಲೆಯ ದೈಹಿಕ ಶಿಕ್ಷಕರಾದ ಕುಮಾರಿ ಕಾವ್ಯ ರವರು ಏರೋಬಿಕ್ಸ್ ಡ್ಯಾನ್ಸ್ ಮಾಡಿಸಿದರು. ಏರೋಬಿಕ್ಸ್ ಡ್ಯಾನ್ಸ್ ಮಾಡಿಸುವ ಮುನ್ನ ಅದರ ವಿಶೇಷತೆ ತಿಳಿಸುತ್ತಾ ನಿಮ್ಮ ಚಲನೆಗಳ ವೇಗ ಮತ್ತು ಲಯವನ್ನು ನಿರ್ಧರಿಸುವ ವೇಗದ ಗತಿಯ ಸಂಗೀತಕ್ಕೆ ತಾಲೀಮುಗಳನ್ನು ಸಾಮಾನ್ಯವಾಗಿ ಹೊಂದಿದ್ದು ನಿಮ್ಮ ಹೃದಯ ಬಡಿತವನ್ನು ಹೆಚ್ಚಿಸುವ ಮೂಲಕ ನೀವು ಸುಡುವ ಕ್ಯಾಲೋರಿಗಳ ಪ್ರಮಾಣವನ್ನು ಅತ್ಯುತ್ತಮವಾಗಿಸಲು ಸಹಕರಿಸುತ್ತದೆ ಎಂದು ತಿಳಿಸುತ್ತಾ ಪ್ರಾತ್ಯಕ್ಷಿಕೆ ಮೂಲಕ ಏರೋಬಿಕ್ಸ್ ಹೇಳಿಕೊಟ್ಟರು.

## ಸ್ವಚ್ಛತೆ


ಶಿಬಿರದಲ್ಲಿ ಎರಡನೇ ದಿನ ಹಾಗೂ ಮೂರನೇ ದಿನ ಬೆಳಗ್ಗೆ 8 ರಿಂದ 9 ರವರೆಗೆ ಸ್ವಚ್ಛತಾ ಕಾರ್ಯವನ್ನು ಆಯೋಜಿಸಲಾಗಿತ್ತು. ಶಿಬಿರಾರ್ಥಿಗಳಿಗೆ ತಾವು ವಾಸಿಸುವ ಸ್ಥಳದ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದ ಹೇಗೆ ಇರಿಸಿಕೊಳ್ಳಬೇಕೆಂಬುದರ ಮಹತ್ವ ಅರಿಯುವ ದೃಷ್ಟಿಯಿಂದ ಎಲ್ಲಾ ಶಿಬಿರಾರ್ಥಿಗಳನ್ನು ವಿವಿಧ ತಂಡಗಳನ್ನಾಗಿ ವಿಂಗಡಿಸಿ ಬೇರೆ ಬೇರೆ ಪ್ರದೇಶಗಳನ್ನು ಸ್ವಚ್ಚತೆ ಮಾಡುವ ಜವಾಬ್ದಾರಿಯನ್ನು ನಿಯೋಜಿಸಲಾಗಿತ್ತು. ಸ್ವಚ್ಛತಾ ಸಂದರ್ಭದಲ್ಲಿ ಶಿಬಿರಾರ್ಥಿಗಳು ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಸಮುದಾಯ ವಾಸ್ತವ್ಯ ಶಿಬಿರದಲ್ಲಿ ತಮ್ಮ ನೆನಪನ್ನು ಉಳಿಸುವ ಕಾರ್ಯವನ್ನು ಮಾಡಿದರು.





## ಸಂವಾದ ಕಾರ್ಯಕ್ರಮ

ಎರಡನೇ ದಿನದ ಮೊದಲ ವೇದಿಕೆ ಕಾರ್ಯಕ್ರಮ ಸಂವಾದದ ಮೂಲಕ ಪ್ರಾರಂಭವಾಯಿತು. **"ಶಿಕ್ಷಕರಿಂದ ಪೋಷಕರ ನಿರೀಕ್ಷೆಗಳು"** ಎಂಬ ವಿಷಯದ ಕುರಿತಾಗಿ ಕಾಫಿ ಬೆಳೆಗಾರರು ಹಾಗೂ ಚಿಂತಕರಾದ ಶ್ರೀ ಯಡೇಹಳ್ಳಿ ಮಂಜುನಾಥ್




ರವರು ನಡೆಸಿಕೊಟ್ಟರು. ಇತ್ತೀಚೆಗಿನ ಶಿಕ್ಷಣದಲ್ಲಿ ಪೋಷಕರು ಶಿಕ್ಷಕರಿಂದ ಬಹಳಷ್ಟನ್ನು ನಿರೀಕ್ಷಿಸುತ್ತಾರೆ. ತಮ್ಮ ಮಗುವಿನ ಸರ್ವತೋಮುಖ ಅಭಿವೃದ್ಧಿ ಶಿಕ್ಷಕರಿಂದ ಮಾತ್ರ ಸಾಧ್ಯ ಎಂದು ನಂಬಿರುವ ಪೋಷಕರು ವಿದ್ಯಾರ್ಥಿಯ ಮಾನಸಿಕ ಬುದ್ಧಿಮಟ್ಟ ಯೋಚಿಸದೆ ಎಲ್ಲಾ ಶಿಕ್ಷಕರಿಂದ ಸಾಧ್ಯ ಎಂಬ ಆಲೋಚನೆಯಲ್ಲಿರುತ್ತಾರೆ ಎಂದು ತಿಳಿಸುತ್ತಾ ಪೋಷಕರಾದ ನಮ್ಮಗಳ ಪಾತ್ರ ಏನು ಎಂಬುದನ್ನು ಎಲ್ಲರೂ ಮರೆತಂತಿದೆ ಎಂದು ತಿಳಿಸಿದರು. ಪ್ರಸ್ತುತ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಗಳ ಕುರಿತಾಗಿ ಚರ್ಚಿಸಿದರು. ಕೊನೆಯಲ್ಲಿ ಆಯ್ದ ಕೆಲವು ಶಿಬಿರಾರ್ಥಿಗಳು ವಿಷಯಕ್ಕೆ ಪೂರಕವಾಗುವಂತಹ ಒಂದಷ್ಟು ಪ್ರಶ್ನೆಗಳನ್ನು ಕೇಳುವ ಮೂಲಕ ಸಂವಾದ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯಿತು.

ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ಯಡೇಹಳ್ಳಿ ಮಂಜುನಾಥ್ ರವರನ್ನು ಶಿಬಿರಾರ್ಥಿ ಅಕ್ಷತಾ ಸಿ.ಎಸ್ ರವರು ಪರಿಚಯಿಸಿದರು ಹಾಗೂ ಯಡೇಹಳ್ಳಿ ಮಂಜುನಾಥ್ ರವರ ಅಪೇಕ್ಷೆಯ ಮೇರೆಗೆ ಹಾಗೂ ಪ್ರಸ್ತುತ ಶಿಕ್ಷಕರಾದ ನಿಮ್ಮಗಳಿಂದ ಪೋಷಕರು ನಿರೀಕ್ಷಿಸಬಹುದಾದ ಉದಾಹರಣೆಗೆ ಅಬ್ರಾಹಂ ಲಿಂಕನ್ ರವರು ತಮ್ಮ ಮಗನ ಶಾಲೆಯ ಶಿಕ್ಷಕರಿಗೆ ಏನನ್ನು ಕಲಿಸಬೇಕೆಂದು ಬರೆದ ಪತ್ರವನ್ನು ಶಿಬಿರಾರ್ಥಿ ಅಕ್ಷತಾ ಸಿ.ಎಸ್ ರವರು ಓದಿದರು. ಶ್ರೀಯುತರಿಗೆ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್ ರವರು ಗೌರವ ಸಮರ್ಪಣೆ ನೆರವೇರಿಸಿದರು.

## ಉಪನ್ಯಾಸ




ಮಧ್ಯಾಹ್ನ 2.30ಕ್ಕೆ ಹಾಸನದ ಕೇಂದ್ರೀಯ ವಿದ್ಯಾಲಯದ ಮನೋವಿಜ್ಞಾನಿಗಳಾದ ಶ್ರೀ ರಘು ಪ್ರಸಾದ್ ಕೆ.ವಿ ರವರು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಮಸ್ಯೆಗಳು ಮತ್ತು ಸವಾಲುಗಳು ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು. ಶ್ರೀಯುತರು ಶಿಬಿರಾರ್ಥಿಗಳ ಕುರಿತು ಮಾತನಾಡುತ್ತಾ ಮಕ್ಕಳಲ್ಲಿ ಅವಧಾನವನ್ನು ಕೇಂದ್ರಿಕರಿಸುವುದರ ಸಲುವಾಗಿ ಅನುಸರಿಸುವ ಹಲವಾರು ಮಾರ್ಗೋಪಾಯಗಳನ್ನು ತಿಳಿಸಿದರು. ಹಾಗೂ ಮಕ್ಕಳಲ್ಲಿ ಕಂಡುಬರುವ ಹಲವಾರು ಮನೋವೈಜ್ಞಾನಿಕ ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಶ್ರೀಯುತರನ್ನು ಶಿಬಿರಾರ್ಥಿ ಅಕ್ಷತ ಸಿ.ಎಸ್ ರವರು ಪರಿಚಯಿಸಿದರು ಹಾಗೂ ಶಿಬಿರದ ಸಹ ಸಂಚಾಲಕರಾದ ಶ್ರೀ ತಮ್ಮಯ್ಯ ಹೆಚ್.ಬಿ ರವರು ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು.

## ಮನೋವೈಜ್ಞಾನಿಕ ಆಟಗಳು





ಸಂಜೆ 4.30ಕ್ಕೆ ಮರಸು ಹೊಸಳ್ಳಿ ಮುರಾರ್ಜಿ ವಸತಿ ಶಾಲೆಯ ಸಹ ಶಿಕ್ಷಕರಾದ ಶ್ರೀ ಲಕ್ಷ್ಮಣ ಬಿ ರವರು ಮನೋವೈಜ್ಞಾನಿಕ ಆಟಗಳನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು.

ಆಟಗಳನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಡುತ್ತಾ ಮನೋವೈಜ್ಞಾನಿಕ ಆಟದಿಂದ ಮಕ್ಕಳ ದೈಹಿಕ, ಮಾನಸಿಕ ಆರೋಗ್ಯವನ್ನು ಹೇಗೆ ಸುಸ್ಥಿತಿಯಲ್ಲಿಡಬಹುದು ಹಾಗೂ ಬೇರೆ ಮಕ್ಕಳೊಡನೆ ಬೆರೆಯುವುದನ್ನು ಕಲಿಯುವುದಲ್ಲದೆ ಮಕ್ಕಳ ಏಕಾಗ್ರತೆ, ಸೃಜನಶೀಲತೆ, ಬುದ್ಧಿಮತ್ತೆ – ಈ ಎಲ್ಲದರ ವಿಕಾಸಕ್ಕೆ ಈ ಆಟಗಳೇ ಪೂರಕ ಎಂದು ತಿಳಿಸುತ್ತಾ, ಈ ಮನೋವೈಜ್ಞಾನಿಕ ಆಟಗಳಿಂದ ಮಕ್ಕಳು ಸಂಭ್ರಮಿಸುತ್ತಾರೆ, ಖುಷಿಯಿಂದಿರುತ್ತಾರೆ, ಕುಣಿದು ಕುಪ್ಪಳಿಸಿ 'ಈ ಕ್ಷಣವಷ್ಟೇ ಸತ್ಯ' ಎಂಬಂತೆ ವರ್ತಮಾನದಲ್ಲಿರುತ್ತಾರೆ ಹಾಗೂ ಈ ಆಟಗಳು ಬರೀ ಆಟವಾಗಿರದೆ ಪಾಠವೂ ಹೌದು ಎಂದು ತಿಳಿಸುತ್ತಾ ಮಂಡಲ ಪರಿಧಿ ಮೇಲೆ ಆಟ, ಮಂಡಲದ ಒಳಗಡೆ ಆಟ, ತತಿ ಆಟ, ಅಭಿಮುಖ ಆಟ, ದಂಡ ಬಳಸಿ ಆಡುವ ಆಟ, ಮೂಟೆ ಹೊರುವುದು, ಕೋಟೆ ಯುದ್ಧ ಎಂಬಿತ್ಯಾದಿ ಆಟಗಳನ್ನು ಆಡಿಸಿದರು.



## ಶಿಬಿರಾಗ್ನಿ



ಹಾಸನದ ಸ್ಕೌಟ್ಸ್ ಅಂಡ್ ಗೈಡ್ಸ್ ತಂಡದ ಮುಖ್ಯಸ್ಥರಾದ ಶ್ರೀ ಗಿರೀಶ್ ಆರ್.ಜಿ ರವರ ಸಾರಥ್ಯದಲ್ಲಿ ಶಿಬಿರಾರ್ಥಿಗಳಿಗೆ ಸಂಜೆ 8 ರಿಂದ 9 ರವರೆಗೆ ಶಿಬಿರಾಗ್ನಿಯನ್ನು ಆಯೋಜಿಸಲಾಗಿತ್ತು.

ಶ್ರೀ ಗಿರೀಶ್ ಆರ್.ಜಿ ರವರು ಶಿಬಿರಾಗ್ನಿಯ ಮಹತ್ವವನ್ನು ತಿಳಿಸುತ್ತಾ, ಶಿಬಿರದಲ್ಲಿ ಅಗ್ನಿದೇವನನ್ನು ಆಹ್ವಾನಿಸುವ ಹಾಗೂ ಆ ಮೂಲಕ ದುಷ್ಟ ಶಕ್ತಿಗಳ ನಿರ್ಮೂಲನೆಯ ಕುರಿತಾಗಿ ಸಂದೇಶ ಸಾರುವ ಹಾಗೂ ಕಾಡು ಜನರು ಹೇಗೆ ಬೆಂಕಿಯನ್ನು ಆವಿಷ್ಕರಿಸಿದರು

ಎಂದು ತಿಳಿಸಿಕೊಟ್ಟರು. ಇದೇ ಸಂದರ್ಭದಲ್ಲಿ ನಿಗೂಢವಾಗಿ ಅಗ್ನಿ ಒತ್ತಿಕೊಳ್ಳುವುದನ್ನು ಕಂಡು ಎಲ್ಲಾ ಶಿಬಿರಾರ್ಥಿಗಳು ನಿಬ್ಬೆರಗಾದರು. ಇದೇ ಸಂದರ್ಭದಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕುಮಾರಸ್ವಾಮಿ ರವರು ಉಪಸ್ಥಿತರಿದ್ದರು.




## ದೀಪ ಭೋಜನ

ಇಂದು ರಾತ್ರಿ 10ಕ್ಕೆ ಮಣ್ಣಿನ ದೀಪದ ಬೆಳಕಿನಿಂದ ಊಟ ಸವಿದಿದ್ದು ವಿಶೇಷವಾಗಿತ್ತು. ಮಾಸ್ತಿ ತಂಡದವರು ಪ್ರತಿ ಶಿಬಿರಾರ್ಥಿಗಳ ಮುಂದೆ ಮಣ್ಣಿನ ದೀಪವನ್ನು ಇರಿಸಿ ವಿಶೇಷ ಊಟಕ್ಕೆ ವ್ಯವಸ್ಥೆ ಮಾಡಿದ್ದರು.






## ಮೂರನೇ ದಿನ (13 ಅಕ್ಟೋಬರ್ 2023ರ ಶುಕ್ರವಾರ)

### ಧ್ವಜಾರೋಹಣ


ಮೂರನೇ ದಿನದ ಧ್ವಜಾರೋಹಣವನ್ನು ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ನಂಜುಂಡಸ್ವಾಮಿ ಕೆ.ಎಸ್ ರವರು ನೆರವೇರಿಸುವ ಮೂಲಕ ಶಿಕ್ಷಕನಿಗೆ ಇರಬೇಕಾಗದ ತಾಳ್ಮೆ ಮತ್ತು ಸಂಯಮದ ಕುರಿತಾಗಿ ಕಿರು ಕಥೆ ಹೇಳುವ ಮೂಲಕ ಚಿಂತನಾ ಕಾರ್ಯಕ್ರಮವನ್ನು ನೆರವೇರಿಸಿದರು.

ಇಂದಿನ ಧ್ವಜಾರೋಹಣ ಸಿದ್ದತೆಯನ್ನು ಬೇಂದ್ರೆ ತಂಡದವರು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್ ಹಾಗೂ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ನೌಕರರಾದ ಶ್ರೀ ತಮ್ಮಯ್ಯ ಹೆಚ್.ಬಿ ಹಾಗೂ ಶ್ರೀ ಮಹೇಶ್ ಎಸ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

### ಸಮಾರೋಪ ಸಮಾರಂಭ

ಶಿಬಿರದ ಅಂತಿಮ ದಿನವಾದ 13 ಅಕ್ಟೋಬರ್ 2023 ರ ಶುಕ್ರವಾರ ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭ ನಡೆಯಿತು. ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ರಾಜಶೇಖರ ಬಿ.ಎ ಹಾಗೂ ವಿಷಯ ಪರಿವೀಕ್ಷಕರಾದ ಶ್ರೀ ಚನ್ನಬಸಪ್ಪ ರವರು ಆಗಮಿಸಿದರು.



ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ರಾಜಶೇಖರ ಬಿ.ಎ ರವರು ಮಾತನಾಡುತ್ತಾ ಶಿಕ್ಷಕರುಗಳಿಗೆ ಪ್ರಮಾಣ ಪತ್ರದ ಜೊತೆಯಲ್ಲಿ ಜ್ಞಾನವನ್ನು ವೃದ್ಧಿಸಿಕೊಳ್ಳುವ ಕಲೆ ಇರಬೇಕು. ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿಷಯದ ಕುರಿತಾಗಿ ಸಂಪೂರ್ಣ ತಿಳಿದುಕೊಳ್ಳದೆ ಇದ್ದಲ್ಲಿ ಶಿಕ್ಷಣ ಪರಿಪೂರ್ಣವಾಗುವುದಿಲ್ಲ ಹಾಗೂ ಶಿಬಿರದಲ್ಲಿ ನೀವೆಲ್ಲರರೂ ನೈಜ ಜೀವನ ಶೈಲಿಯನ್ನು ಕಲಿತಿದ್ದೀರಿ, ಎಲ್ಲರೊಂದಿಗೆ ಬೆರೆಯುವ ಹಾಗೂ ನಾಯಕತ್ವ ಗುಣವನ್ನು ಬೆಳೆಸಿಕೊಂಡು ನಿಭಾಯಿಸುವ ಕಲೆಯನ್ನು ತಾವೆಲ್ಲರೂ ಕಲಿತಿದ್ದೀರಿ ಎಂದು ಭಾವಿಸುತ್ತಾ ಎಲ್ಲರಿಗೂ ಶುಭವಾಗಲೆಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ, ಮರಸು ಹೊಸಳ್ಳಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಕಾಶ್ ಹೆಚ್.ಎಸ್, ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ ಆರ್, ಶಿಬಿರದ ಸಂಚಾಲಕರಾದ ಡಾ. ಸಿ.ಬಿ ವಿಕ್ರಮ್, ಸಹಾಯಕ ಪ್ರಾಧ್ಯಾಪಕರಾದ ಶ್ರೀ ನಂಜುಂಡಸ್ವಾಮಿ ಕೆ.ಎಸ್, ಶಿಬಿರದ ಸಹ ಸಂಚಾಲಕರಾದ ಶ್ರೀ ತಮ್ಮಯ್ಯ ಹೆಚ್.ಬಿ, ನೌಕರರಾದ ಶ್ರೀ ಮಹೇಶ್ ಎಸ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಮಧ್ಯಾಹ್ನದ ಭೋಜನ ವ್ಯವಸ್ಥೆಯ ಮೂಲಕ ಮೂರು ದಿನದ ಸಮುದಾಯ ವಾಸ್ತವ್ಯ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಸಿಂಹ ಧ್ವನಿ ಕನ್ನಡ ದಿನ ಪತ್ರಿಕೆ ಪುಟ-2

# ಮೂರು ದಿನಗಳ "ಸಮುದಾಯ ವಾಸ್ತವ್ಯ ಶಿಬಿರ" ಕಾರ್ಯಕ್ರಮ




ಆಲೂರು, ಅ.11: ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು, ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಾಲ್ಲೂಕು ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಧೀಶರರಾದ ನಿರ್ಮಲಾ ತಿಳಿಸಿದರು.

ತಾಲ್ಲೂಕು ಮರಸು ಹೊಸಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ಆಯೋಜಿಸಿದ್ದ ಮೂರು ದಿನಗಳ "ಸಮುದಾಯ ವಾಸ್ತವ್ಯ ಶಿಬಿರ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಎಂದು ಶುಭ ಹಾರೈಸಿದರು.

ವಕೀಲ ಕೆ.ಜಿ. ನಾಗರಾಜ್ ಮಾತನಾಡಿ, ಪ್ರತಿಯೊಬ್ಬರೂ ವಿವೇಕಾನಂದರ ಆದರ್ಶವನ್ನು ಪಾಲಿಸಬೇಕು, ನಮಗೆ ಎಲ್ಲಾ ವಿದ್ಯಾರ್ಥಿಗಳನ್ನು ಬೆಳೆಸುವ ಘನ ಜವಾಬ್ದಾರಿ ಇದೆ, ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದುದು ಎಂದ ಅವರು ಇಂದು ಹೆಣ್ಣು ಮಕ್ಕಳ ದಿನವಾಗಿದ್ದು ಅದರ ಮಹತ್ವವನ್ನು ತಿಳಿಸಿದರು.

ಶಿಬಿರದ ಮುಖ್ಯ ಅತಿಥಿ, ಮರಸು ಹೊಸಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಎಂ ಎಸ್ ಪ್ರಕಾಶ್ ಮಾತನಾಡಿ, ಶಿಕ್ಷಕರು ತಪ್ಪು ಮಾಡಿದರೆ ಒಂದು ಮುಂದಿನ ಸಮುದಾಯವೇ ತಪ್ಪು ಮಾಡಿದಂತೆ, ಆದುದರಿಂದ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಕರಿಗೆ ಇದೆ. ನಮ್ಮ ಜ್ಞಾನವು ನಮ್ಮ ನಡವಳಿಕೆಯಲ್ಲಿ ಪ್ರತಿಬಿಂಬ ಆಗಬೇಕು. ಶಿಕ್ಷಿತರು ಸಮಾಜವನ್ನು ಪರಿವರ್ತನೆ ಮಾಡಬೇಕು. ನಮ್ಮ ಶಿಕ್ಷಣಕ್ಕೆ ಅರ್ಥ ಬರಬೇಕಾದರೆ ಸಮಕಾಲೀನ ಶಿಕ್ಷಣದ ಮಹತ್ವವನ್ನು ತಿಳಿಯಬೇಕು ಎಲ್ಲರೂ ಮುಂದಿನ ದಿನಗಳಲ್ಲಿ ಒಳ್ಳೆಯ ಶಿಕ್ಷಕರಾಗಿ ಶಿಕ್ಷಕ ಹುದ್ದೆಗೆ ತಕ್ಕಂತೆ ಘನತೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಣತೂರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೃಷ್ಠಿ ಜಯರಾಮ್ ಶಿಭಿರಾರ್ಥಿಗಳಿಗೆ ಶುಭ ಹಾರೈಸಿದರು.

ಶಿಬಿರದ ಸಂಚಾಲಕರಾದ ಡಾ ವಿಕ್ರಮ್ ಸಿ ಬಿ ರವರು ಶಿಬಿರಾರ್ಥಿಗಳಿಗೆ ಶಿಕ್ಷಕರು ಸಮುದಾಯದೊಂದಿಗೆ ಹೇಗೆ ವರ್ತಿಸಬೇಕೆಂದು ತಿಳಿಸಿ ಶಿಬಿರದ ಯಶಸ್ಸಿಗೆ ನಮ್ಮೆಲ್ಲರ ಸಂಪೂರ್ಣ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದು ತಿಳಿಸಿದರು.

ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ್ ಆರ್ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಮಯ ಪ್ರಜ್ಞೆ ಮತ್ತು ಕರ್ತವ್ಯನಿಷ್ಠೆ ಇದರ ಬಗ್ಗೆ ತಿಳಿಸುತ್ತಾ ಶಿಬಿರದ ಉದ್ದೇಶ ತಿಳಿಸಿದರು.

ಅಧ್ಯಕ್ಷತೆಯನ್ನು ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ ಎಸ್ ನಂಜುಂಡಪ್ಪ ರವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಆರ್ ಬಿ ಸುರೇಶ್, ಸಹ ಸಂಚಾಲಕರಾದ ಹೆಚ್.ಬಿ ತಮ್ಮಯ್ಯ, ಮಹೇಶ್ ರವರು ಸೇರಿದಂತೆ ಶಿಬಿರಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಿಂಹಧ್ವನಿ ದಿನಪತ್ರಿಕೆ – 12 ಅಕ್ಟೋಬರ್ 2023

# ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃ



ಆಲೂರು: ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು, ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಾಲ್ಲೂಕು ಸಿವಿಲ್ ಹಾಗೂ ಜೆ ಎಂ ಎಫ್ ಸಿ ನ್ಯಾಯಾಧೀಶರರಾದ ನಿರ್ಮಲಾ ತಿಳಿಸಿದರು.

ತಾಲ್ಲೂಕು ಮರಸು ಹೊಸಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜೆ-ಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ಆಯೋಜಿಸಿದ್ದ ಮೂರು ದಿನಗಳ " ಸಮುದಾಯ ವಾಸ್ತವ್ಯ ಶಿಬಿರ " ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಎಂದು ಶುಭ ಹಾರೈಸಿದರು.

ವಕೀಲ ಕೆ.ಜಿ. ನಾಗರಾಜ್ ಮಾತನಾಡಿ, ಪ್ರತಿಯೊಬ್ಬರೂ ವಿವೇಕಾನಂದರ ಆದರ್ಶವನ್ನು ಪಾಲಿಸಬೇಕು, ನಮಗೆ ಎಲ್ಲಾ ವಿದ್ಯಾರ್ಥಿಗಳನ್ನು ಬೆಳೆಸುವ ಘನ ಜವಾಬ್ದಾರಿ ಇದೆ.

>>2

## ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃ

ಶಿಕ್ಷಕ ವೃತ್ತಿ ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದುದು ಎಂದ ಅವರು ಇಂದು ಹೆಣ್ಣು ಮಕ್ಕಳ ದಿನವಾಗಿದ್ದು ಅದರ ಮಹತ್ವವನ್ನು ತಿಳಿಸಿದರು.

ಶಿಬಿರದ ಮುಖ್ಯ ಅತಿಥಿ, ಮರಸು ಹೊಸಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಎಂ ಎಸ್ ಪ್ರಕಾಶ್ ಮಾತನಾಡಿ.

ಶಿಕ್ಷಕರು ತಪ್ಪು ಮಾಡಿದರೆ ಒಂದು ಮುಂದಿನ ಸಮುದಾಯವೇ ತಪ್ಪು ಮಾಡಿದಂತೆ, ಆದುದರಿಂದ ವಿದ್ಯಾರ್ಥಿಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಕರಿಗೆ ಇದೆ. ನಮ್ಮ ಜ್ಞಾನವು ನಮ್ಮ ನಡವಳಿಕೆಯಲ್ಲಿ ಪ್ರತಿಬಿಂಬ ಆಗಬೇಕು. ಶಿಕ್ಷಿತರು ಸಮಾಜವನ್ನು ಪರಿವರ್ತನೆ ಮಾಡಬೇಕು. ನಮ್ಮ ಶಿಕ್ಷಣಕ್ಕೆ ಅರ್ಥ ಬರಬೇಕಾದರೆ ಸಮಕಾಲೀನ ಶಿಕ್ಷಣದ ಮಹತ್ವವನ್ನು ತಿಳಿಯಬೇಕು ಎಲ್ಲರೂ ಮುಂದಿನ ದಿನಗಳಲ್ಲಿ ಒಳ್ಳೆಯ ಶಿಕ್ಷಕರಾಗಿ ಶಿಕ್ಷಕ ಹುದ್ದೆಗೆ ತಕ್ಕಂತೆ ಘನತೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಣತೂರು ಗ್ರಾಮ ಪಂಚಾಯತಿ ಸದಸ್ಯರು ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೃಷ್ಠಿ ಜಯರಾಮ್ ಶಿಭಿರಾರ್ಥಿಗಳಿಗೆ ಶುಭ ಹಾರೈಸಿದರು.

ಶಿಬಿರದ ಸಂಚಾಲಕರಾದ ಡಾ ವಿಕ್ರಮ್ ಸಿ ಬಿ ರವರು ಶಿಬಿರಾರ್ಥಿಗಳಿಗೆ ಶಿಕ್ಷಕರು ಸಮುದಾಯದೊಂದಿಗೆ ಹೇಗೆ ವರ್ತಿಸಬೇಕೆಂದು ತಿಳಿಸಿ ಶಿಬಿರದ ಯಶಸ್ಸಿಗೆ ನಮ್ಮೆಲ್ಲರ ಸಂಪೂರ್ಣ ಪಾಲ್ಗೊಳ್ಳುವಿಕೆ ಬಹು ಮುಖ್ಯ ಎಂದು ತಿಳಿಸಿದರು.

ಶಿಬಿರದ ಮಾರ್ಗದರ್ಶಕರಾದ ಶ್ರೀ ಮಂಜುನಾಥ್ ಆರ್ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಮಯ ಪ್ರಜ್ಞೆ ಮತ್ತು ಕರ್ತವ್ಯನಿಷ್ಠೆ ಇದರ ಬಗ್ಗೆ ತಿಳಿಸುತ್ತಾ ಶಿಬಿರದ ಉದ್ದೇಶ ತಿಳಿಸಿದರು.

ಅಧ್ಯಕ್ಷತೆಯನ್ನು ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ ಎಸ್ ನಂಜುಂಡಪ್ಪ ರವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಆರ್ ಬಿ ಸುರೇಶ್. ಶಿಬಿರದ ಸಹ ಸಂಚಾಲಕರಾದ ಹೆಚ್.ಬಿ ತಮ್ಮಯ್ಯ, ಮಹೇಶ್ ರವರು ಸೇರಿದಂತೆ ಶಿಬಿರಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜನಹಿತ ದಿನಪತ್ರಿಕೆ – 12 ಅಕ್ಟೋಬರ್ 2023




ಆಲೂರು ಕಸಬಾ ಮರಸು ಹೊಸಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 3 ದಿನಗಳ ಸಮುದಾಯ ವಾಸ್ತವ್ಯ ಶಿಬಿರದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಎಂ. ಸಿ. ನಿರ್ಮಲಾ ಮಾತನಾಡಿದರು.

# ಸಮಾಜದಲ್ಲಿ ಶಿಕ್ಷಕರ ಪಾತ್ರ ಮುಖ್ಯ: ನಿರ್ಮಲಾ

**ಆಲೂರು:** ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಎಂ. ಸಿ. ನಿರ್ಮಲಾ ಹೇಳಿದರು.

ಆಲೂರು ಕಸಬಾ ಮರಸು ಹೊಸಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ ವತಿಯಿಂದ 3 ದಿನಗಳ ಸಮುದಾಯ ವಾಸ್ತವ್ಯ ಶಿಬಿರ ಉದ್ಘಾಟನೆ ನೆರವೇರಿಸಿ ಮಾತನಾಡಿ, ಶಿಬಿರದಲ್ಲಿ ವ್ಯಕ್ತವಾಗುವ ಪ್ರತಿಯೊಂದು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್. ನಂಜುಂಡಪ್ಪ ಮಾತನಾಡಿ, ಶಿಬಿರಾರ್ಥಿಗಳಿಗೆ ಅವಶ್ಯವಿರುವ ಶಿಸ್ತು ಹಾಗೂ ಸಮಯ ಪ್ರಜ್ಞೆ ಮುಂದಿನ ಜೀವನದ ದಾರಿದೀಪ ಎಂದರು.

ವಕೀಲ ಕೆ. ಜಿ. ನಾಗರಾಜ್ ಮಾತನಾಡಿ, ವಿವೇಕಾನಂದರ ಆದರ್ಶವನ್ನು ಜೀವನದಲ್ಲಿ ಪಾಲಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಸಂಚಾಲಕ ವಿಕ್ರಮ್, ಮಾರ್ಗದರ್ಶಕ ಮಂಜುನಾಥ್, ಎಲಿಜಬೆತ್ ಸೋನಿ, ಅಮೃತಾ, ಚಾಂದಿನಿ, ಸುನೀತಾ ಇದ್ದರು.

**ಹೊಸದಿಗಂತ ದಿನಪತ್ರಿಕೆ – 13 ಅಕ್ಟೋಬರ್ 2023**

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

